**ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ: FEE124FLL2025 ಬೆಂಗಳೂರು, ದಿನಾಂಕ: 15-09-2025 ರನ್ವಯ ಕಂದಾಯ ಇಲಾಖೆಯ ಸ್ವಾದೀನದಲ್ಲಿರುವ ಅರಣ್ಯ ಪ್ರದೇಶಗಳನ್ನು ಅರಣ್ಯ ಉದ್ದೇಶಕ್ಕಾಗಿ ಹೊರತುಪಡಿಸಿ ಬೇರೆ ಉದ್ದೇಶಕ್ಕಾಗಿ ಹಂಚಿಕೆ ಮಾಡಿರುವ ವಿಷಯದ ಕುರಿತು ಚರ್ಚಿಸಿ ತನಿಖೆ ಕೈಗೊಂಡು ರಾಜ್ಯ ಮಟ್ಟದ ವಿಶೇಷ ತನಿಖಾ ತಂಡಕ್ಕೆ ವರದಿ ಸಲ್ಲಿಸುವ ಸಲುವಾಗಿ ಮಾನ್ಯ ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ದಂಡಾಧಿಕಾರಿಗಳು, ಧಾರವಾಡ ಜಿಲ್ಲೆ, ಧಾರವಾಡ ರವರ ಆದೇಶ ಸಂಖ್ಯೆ: ಅರಣ್ಯ:ಸಿಆರ್: 10: 2025-26, ದಿನಾಂಕ: 26-09-2025 ರನ್ವಯ ರಚಿಸಿದ "ಜಿಲ್ಲಾ ಮಟ್ಟದ ಉಪ ಸಮಿತಿ"ಯ ಅಧ್ಯಕ್ಷರಾದ ಅಪರ ಜಿಲ್ಲಾಧಿಕಾರಿಗಳು ಹಾಗೂ ಅಪರ ಜಿಲ್ಲಾ ದಂಡಾಧಿಕಾರಿಗಳು, ಧಾರವಾಡ ಜಿಲ್ಲೆ, ಧಾರವಾಡ ಅವರ ಅಧ್ಯಕ್ಷತೆಯಲ್ಲಿ ದಿನಾಂಕ: 03-12-2025 ರಂದು ಬೆಳಿಗ್ಗೆ 11.00 ಘಂಟೆಗೆ ನಡೆದ ಸಭೆಯ ಸಭಾ ನಡಾವಳಿಗಳು.**

**ಉಪಸ್ಥಿತರು:**

1. ಶ್ರೀಮತಿ ಗೀತಾ ಸಿ. ಡಿ. ಕ.ಆ.ಸೇ, ಮಾನ್ಯ ಅಪರ ಜಿಲ್ಲಾಧಿಕಾರಿಗಳು ಹಾಗೂ ಅಪರ ಜಿಲ್ಲಾ ದಂಡಾಧಿಕಾರಿಗಳು, ಧಾರವಾಡ ಜಿಲ್ಲೆ.
2. ಶ್ರೀ ವಿವೇಕ ಟಿ ಕವರಿ, ಕ.ಅ.ಸೇ, ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಪ್ರಾದೇಶಿಕ ಅರಣ್ಯ ವಿಭಾಗ, ಧಾರವಾಡ
3. ಶ್ರೀ ಶಾಲಂ ಹುಸೇನ್, ಉಪ ವಿಭಾಗಾಧಿಕಾರಿಗಳು, ಧಾರವಾಡ ಉಪ ವಿಭಾಗ, ಧಾರವಾಡ.
4. ಶ್ರೀ ಮೋಹನ ಶಿವಣ್ಣವರ, ಜಿಲ್ಲಾಧಿಕಾರಿಗಳ ತಾಂತ್ರಿಕ ಸಹಾಯಕರು ಹಾಗೂ ಪದನಿಮಿತ್ತ ಭೂ ದಾಖಲೆಗಳ ಉಪ ನಿರ್ದೇಶಕರು, ಧಾರವಾಡ
5. ಜಂಟಿ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ ಧಾರವಾಡ

ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ: FEE124FLL2025 ಬೆಂಗಳೂರು, ದಿನಾಂಕ: 15-09-2025 ರನ್ವಯ ಮಾನ್ಯ ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ದಂಡಾಧಿಕಾರಿಗಳು, ಧಾರವಾಡ ಜಿಲ್ಲೆ, ಧಾರವಾಡ ರವರ ಆದೇಶ ಸಂಖ್ಯೆ: ಅರಣ್ಯ:ಸಿಆರ್: 10: 2025-26, ದಿನಾಂಕ: 26-09-2025 ರ ಪ್ರಕಾರ ರಚನೆಯಾದ ಧಾರವಾಡ ಜಿಲ್ಲೆಯ "**ಜಿಲ್ಲಾ ಮಟ್ಟದ ಉಪ ಸಮಿತಿ**" **ಯ** ಸರ್ವ ಸದಸ್ಯರ ಸಭೆಯು ಇಂದು ದಿನಾಂಕ: 03-12-2025 ರಂದು ಬೆಳಿಗ್ಗೆ 11.00 ಘಂಟೆಗೆ **ಉಪ ಸಮಿತಿಯ** ಅಧ್ಯಕ್ಷರಾದ ಶ್ರೀಮತಿ ಗೀತಾ ಸಿ. ಡಿ., ಅಪರ ಜಿಲ್ಲಾಧಿಕಾರಿಗಳು ಹಾಗೂ ಅಪರ ಜಿಲ್ಲಾ ದಂಡಾಧಿಕಾರಿಗಳು, ಧಾರವಾಡ ಜಿಲ್ಲೆ, ಧಾರವಾಡ ಅವರ ಅಧ್ಯಕ್ಷತೆಯಲ್ಲಿ ನಡೆಯಿತು.

ಧಾರವಾಡ ಜಿಲ್ಲೆಯ **ಜಿಲ್ಲಾ ಮಟ್ಟದ ಉಪ ಸಮಿತಿಯ** ಸದಸ್ಯ ಕಾರ್ಯದರ್ಶಿಗಳಾದ ಶ್ರೀ ವಿವೇಕ ಕವರಿ, ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಧಾರವಾಡ ಪ್ರಾದೇಶಿಕ ಅರಣ್ಯ ವಿಭಾಗ, ಧಾರವಾಡ ಇವರು ಎಲ್ಲರಿಗೂ ಸ್ವಾಗತವನ್ನು ಕೋರಿದರು. ಅಧ್ಯಕ್ಷರ ಅನುಮತಿಯೊಂದಿಗೆ ಸಭೆಗೆ ಚಾಲನೆ ದೊರೆಯಿತು.

**ಜಿಲ್ಲಾ ಮಟ್ಟದ ಉಪ ಸಮಿತಿಯ** ಸದಸ್ಯ ಕಾರ್ಯದರ್ಶಿಗಳಾದ ಶ್ರೀ ವಿವೇಕ ಕವರಿ, ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಧಾರವಾಡ ಪ್ರಾದೇಶಿಕ ಅರಣ್ಯ ವಿಭಾಗ, ಧಾರವಾಡ ಇವರು ಮಾನ್ಯ ಸರ್ವೋಚ್ಚ ನ್ಯಾಯಾಲಯದ ಆದೇಶದಂತೆ ಕರ್ನಾಟಕ ಸರ್ಕಾರವು ಸರ್ಕಾರಿ ಆದೇಶ ಸಂಖ್ಯೆ: FEE124FLL2025 ಬೆಂಗಳೂರು, ದಿನಾಂಕ: 15-09-2025 ರನ್ವಯ ಮಾನ್ಯ ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ದಂಡಾಧಿಕಾರಿಗಳು, ಧಾರವಾಡ ಜಿಲ್ಲೆ, ಧಾರವಾಡ ರವರ ಆದೇಶ ಸಂಖ್ಯೆ: ಅರಣ್ಯ:ಸಿಆರ್: 10: 2025-26, ದಿನಾಂಕ: 26-09-2025 ರ ಪ್ರಕಾರ **ಜಿಲ್ಲಾ ಮಟ್ಟದ ಉಪ ಸಮಿತಿಯನ್ನು** ರಚಿಸಿದ್ದು, ಕಂದಾಯ ಇಲಾಖೆಯ ಸ್ವಾದೀನದಲ್ಲಿರುವ ಅರಣ್ಯ ಪ್ರದೇಶಗಳನ್ನು ಅರಣ್ಯ ಉದ್ದೇಶಕ್ಕಾಗಿ ಹೊರತುಪಡಿಸಿ ಬೇರೆ ಉದ್ದೇಶಕ್ಕಾಗಿ ಹಂಚಿಕೆ ಮಾಡಿರುವ ವಿಷಯದ ಕುರಿತು ಚರ್ಚಿಸಿ ತನಿಖೆ ಕೈಗೊಂಡು ರಾಜ್ಯ ಮಟ್ಟದ ವಿಶೇಷ ತನಿಖಾ ತಂಡಕ್ಕೆ ವರದಿ ಸಲ್ಲಿಸುವುದು ಅತೀ ಅವಶ್ಯವಿದೆ ಎಂದು ಸಭೆಗೆ ವಿವರಿಸಿದರು.

ಕರ್ನಾಟಕ ಸರ್ಕಾರದ ಆದೇಶದಲ್ಲಿ ಈ ಕೆಳಗಿನಂತೆ ನಿರ್ದೇಶನವಿದೆ ಎಂದು ಸಭೆಗೆ ವಿವರಿಸಿದರು.

1) ರಾಜ್ಯದಲ್ಲಿರುವ ಎಲ್ಲಾ ಅಧಿಸೂಚಿತ ಅರಣ್ಯ ಪ್ರದೇಶಗಳಲ್ಲಿ ಕಂದಾಯ ಇಲಾಖೆಯಿಂದ ಖಾಸಗಿ ವ್ಯಕ್ತಿಗಳು, ಖಾಸಗಿ ಸಂಸ್ಥೆಗಳು ಹಾಗೂ ಸರ್ಕಾರಿ ಸಂಸ್ಥೆಗಳಿಗೆ ಹಂಚಿಕೆ/ಮಂಜೂರು ಮಾಡಲಾಗಿರುವ ಪ್ರದೇಶಗಳನ್ನು ಮೊದಲನೇ ಹಂತದಲ್ಲಿ ಒಂದು ತಿಂಗಳೊಳಗಾಗಿ ಗುರುತಿಸತಕ್ಕದ್ದು.

2) 1980 ರ ಪೂರ್ವದಲ್ಲಿ ಕಂದಾಯ ಇಲಾಖೆಯಿಂದ ಅಧಿಸೂಚಿತ ಅರಣ್ಯಗಳಲ್ಲಿ ಭೂ-ಪ್ರದೇಶವನ್ನು ಹಂಚಿಕೆ/ ಮಂಜೂರಾತಿ ಮಾಡಲಾಗಿದ್ದರೆ, ಸದರಿ ಮಂಜೂರಾತಿಯನ್ನು ಸಕ್ಷಮ ಪ್ರಾಧಿಕಾರದಿಂದ ಮಾಡಲಾಗಿದೆಯೇ? ಎಂಬುದನ್ನು ಜಿಲ್ಲಾ ಮಟ್ಟದ ವಿಶೇಷ ತನಿಖಾ ತಂಡಗಳು ಖಚಿತಪಡಿಸಿಕೊಳ್ಳತಕ್ಕದ್ದು. ಒಂದು ವೇಳೆ ಸಕ್ಷಮ ಪ್ರಾಧಿಕಾರದಿಂದ ಮಂಜೂರಾತಿಯನ್ನು ಮಾಡಲಾಗಿದ್ದರೆ, ಸದರಿ ಅರಣ್ಯ ಪ್ರದೇಶಗಳನ್ನು ಮಂಜೂರಾತಿ ಮಾಡಿದ ಪ್ರಾಧಿಕಾರಕ್ಕೆ ಅರಣ್ಯ ಪ್ರದೇಶವನ್ನು ಮಂಜೂರಾತಿ ಮಾಡುವ ಅಧಿಕಾರವನ್ನು ಯಾವ ಆದೇಶ/ ಕಾಯ್ದೆ/ ನಿಯಮಗಳಲ್ಲಿ ಪ್ರದತ್ತವಾಗಿದೆ ಎನ್ನುವುದರ ಕುರಿತಾದ ದಾಖಲೆಗಳ ವಿವರಗಳನ್ನು ಪರಿಶೀಲಿಸಿ ಸದರಿ ಪಟ್ಟಿಯನ್ನು ಸೂಕ್ತ ಶಿಫಾರಸ್ಸಿನೊಂದಿಗೆ ರಾಜ್ಯ ಮಟ್ಟದ ವಿಶೇಷ ತನಿಖಾ ತಂಡಕ್ಕೆ ಸಲ್ಲಿಸತಕ್ಕದ್ದು.

3) 1980 ರ ಪೂರ್ವದಲ್ಲಿ ಕಂದಾಯ ಇಲಾಖೆಯ ಸಕ್ಷಮ ಪ್ರಾಧಿಕಾರ ಹೊರತುಪಡಿಸಿ ಇತರೆ ಪ್ರಾಧಿಕಾರಿಯು ಅರಣ್ಯ ಪ್ರದೇಶಗಳನ್ನು ಮಂಜೂರಾತಿ ಮಾಡಿದಂತಹ ಎಲ್ಲಾ ಹಂಚಿಕೆ / ಮಂಜೂರಾತಿಗಳನ್ನು ಸೂಕ್ತ ದಾಖಲೆಗಳೊಂದಿಗೆ ಪರಿಶೀಲಿಸಿ, ಸದರಿ ಹಂಚಿಕೆ/ಮಂಜೂರಾತಿಗಳು ಕಾನೂನುಬಾಹಿರ ಮಂಜೂರಾತಿಗಳ ಪಟ್ಟಿಯನ್ನು ಸೂಕ್ತ ಶಿಫಾರಸ್ಸಿನೊಂದಿಗೆ ರಾಜ್ಯ ಮಟ್ಟದ ವಿಶೇಷ ತನಿಖಾ ತಂಡಕ್ಕೆ ಸಲ್ಲಿಸತಕ್ಕದ್ದು.

4) 1980 ನಂತರದಲ್ಲಿ ಅಧಿಸೂಚಿತ ಅರಣ್ಯ ಪ್ರದೇಶಗಳಲ್ಲಿ ಮಾಡಲಾದ ಎಲ್ಲಾ ಮಂಜೂರಾತಿಗಳು ಕಾನೂನುಬಾಹಿರ ಮಂಜೂರಾತಿಗಳೆಂದು ಪರಿಗಣಿಸತಕ್ಕದ್ದು.

5) ಎರಡನೇ ಹಂತದಲ್ಲಿ ದಿನಾಂಕ: 12-12-1996 ರ ನಂತರ ಸರ್ಕಾರಿ ದಾಖಲೆಗಳಲ್ಲಿ "ಅರಣ್ಯ" ವೆಂದು ನಮೂದಿಸಲ್ಪಟ್ಟಿರುವ ಪ್ರದೇಶಗಳಲ್ಲಿ (ಅಧಿಸೂಚಿತ ಅರಣ್ಯಗಳನ್ನು ಹೊರತುಪಡಿಸಿ) ಕಂದಾಯ ಇಲಾಖೆಯಿಂದ ಖಾಸಗಿ ವ್ಯಕ್ತಿಗಳು, ಖಾಸಗಿ ಸಂಸ್ಥೆಗಳು ಹಾಗೂ ಸರ್ಕಾರಿ ಸಂಸ್ಥೆಗಳಿಗೆ ಹಂಚಿಕೆ/ಮಂಜೂರು ಮಾಡಲಾಗಿರುವ ಪ್ರದೇಶಗಳನ್ನು ಸೂಕ್ತ ದಾಖಲೆಗಳೊಂದಿಗೆ ರಾಜ್ಯ ಮಟ್ಟದ ವಿಶೇಷ ತನಿಖಾ ತಂಡಕ್ಕೆ ಸಲ್ಲಿಸುವುದು.

6) ಕಾರ್ಯವ್ಯಾಪ್ತಿಯ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು ಅಧಿಸೂಚಿತ ಅರಣ್ಯಗಳಲ್ಲಿ ಕಂದಾಯ ಇಲಾಖೆಯಿಂದ ಖಾಸಗಿ ವ್ಯಕ್ತಿಗಳು, ಖಾಸಗಿ ಸಂಸ್ಥೆಗಳು ಹಾಗೂ ಸರ್ಕಾರಿ ಸಂಸ್ಥೆಗಳಿಗೆ ಹಂಚಿಕೆ/ಮಂಜೂರು ಮಾಡಲಾಗಿರುವ ಪ್ರದೇಶಗಳ ಲಭ್ಯವಿರುವ ಪಟ್ಟಿಯನ್ನು ಜಿಲ್ಲಾ ಮಟ್ಟದ ವಿಶೇಷ ತನಿಖಾ ತಂಡಕ್ಕೆ ಒದಗಿಸತಕ್ಕದ್ದು, ಆದರೆ, ಸದರಿ ಪಟ್ಟಿಯಲ್ಲಿನ ಮಾಹಿತಿಯನ್ನು ಪರಿಗಣನೆಗೆ ಮಾತ್ರ ಬಳಸತಕ್ಕದ್ದು ಮತ್ತು ಯಾವುದೇ ಕಾರಣಕ್ಕೂ ಸದರಿ ಪಟ್ಟಿಯನ್ನು ಅಂತಿಮವೆಂದು ತೀರ್ಮಾನಿಸತಕ್ಕದ್ದಲ್ಲ. ಜಿಲ್ಲಾ ಮಟ್ಟದ ವಿಶೇಷ ತನಿಖಾ ತಂಡಕ್ಕೆ ಲಭ್ಯವಾಗುವ ಅರಣ್ಯ ಹಾಗೂ ಕಂದಾಯ ದಾಖಲೆಗಳನ್ನು ಪರಿಶೀಲಿಸುವ ಮೂಲಕ ಅಂತಿಮ ಪಟ್ಟಿಯನ್ನು ಸಿದ್ಧಪಡಿಸಿ ಸೂಕ್ತ ಶಿಫಾರಸ್ಸನ್ನು ರಾಜ್ಯ ಮಟ್ಟದ ವಿಶೇಷ ತನಿಖಾ ತಂಡಕ್ಕೆ ಸಲ್ಲಿಸತಕ್ಕದ್ದು.

7) ಜಿಲ್ಲಾ ಮಟ್ಟದ ವಿಶೇಷ ತನಿಖಾ ತಂಡಗಳಿಂದ ಗುರುತಿಸಲಾಗುವ ಪ್ರತಿ ಪ್ರಕರಣಗಳಲ್ಲಿ ಕಾನೂನು ಬಾಹಿರವಾಗಿ ಖಾಸಗಿ ವ್ಯಕ್ತಿಗಳು, ಖಾಸಗಿ ಸಂಸ್ಥೆಗಳು ಹಾಗೂ ಸರ್ಕಾರಿ ಸಂಸ್ಥೆಗಳಿಗೆ ಹಂಚಿಕೆ/ಮಂಜೂರಾತಿ ಮಾಡಲ್ಪಟ್ಟಿರುವ ಪ್ರತಿ ಪ್ರಕರಣಕ್ಕೂಸದರಿ ಅರಣ್ಯ ಪ್ರದೇಶವನ್ನು ಇಲಾಖೆಯ ವಶಕ್ಕೆ ಮರಳಿ

ಪಡೆಯಲು ಕ್ರಮಗಳನ್ನು ತೆಗೆದುಕೊಳ್ಳುವ ಬಗ್ಗೆ ಸೂಕ್ತ ಶಿಫಾರಸ್ಸನ್ನು ರಾಜ್ಯಮಟ್ಟದ ವಿಶೇಷ ತನಿಖಾ ತಂಡಕ್ಕೆ ಸಲ್ಲಿಸತಕ್ಕದ್ದು.

8) ಒಂದು ವೇಳೆ ಮಂಜೂರಾತಿ ಮಾಡಲ್ಪಟ್ಟಿರುವ ಅರಣ್ಯ ಪ್ರದೇಶಗಳನ್ನು ಮರಳಿ ಇಲಾಖೆಯ ವಶಕ್ಕೆ ಪಡೆಯುವದು ಸಾರ್ವಜನಿಕ ಹಿತಾಸಕ್ತಿಯ ದೃಷ್ಟಿಯಿಂದ ಪೂರಕವಲ್ಲದಿದ್ದರೆ, ಖಾಸಗಿ ವ್ಯಕ್ತಿಗಳು/ಕಾಸಗಿ ಸಂಸ್ಥೆಗಳಿಂದ ಹಾಗೂ ಸರ್ಕಾರಿ ಸಂಸ್ಥೆಗಳಿಂದ ಸದರಿ ಪ್ರದೇಶಗಳ ಸರ್ಕಾರಿ ಮಾರ್ಗದರ್ಶನ ಮೌಲ್ಯ (Government guidance value) ಬೆಲೆಯನುಸಾರ ಪರಿಹಾರ ಮೊತ್ತವನ್ನು ವಸೂಲಿ ಮಾಡುವುದುನ್ನು ಒಳಗೊಂಡಂತೆ ಪ್ರಕರಣವಾರು ಅಳವಡಿಸಿಕೊಳ್ಳಬಹುದಾದ ಕ್ರಮಗಳನ್ನು ರಾಜ್ಯಮಟ್ಟದ ವಿಶೇಷ ತನಿಖಾ ತಂಡಕ್ಕೆ ಸಲ್ಲಿಸತಕ್ಕದ್ದು.

9) ವಿಶೇಷ ತನಿಖಾ ತಂಡಗಳು ಸದರಿ ಮೇಲ್ಕಾಣಿಸಿದ ಪ್ರದೇಶಗಳನ್ನು ಗುರುತಿಸಲು ಕರ್ನಾಟಕ ರಾಜ್ಯ ದೂರ ಸಂವೇದಿ ಅನ್ವಯಿಕ ಕೇಂದ್ರವು ಅರಣ್ಯ ಭೂಮಿಗಳ ಕ್ರೊಢೀಕೃತ ದಾಖಲೆ (Consolidated Record of Forest Lands) ಗಳನ್ನು ತಯಾರಿಸಲು ಅಭಿವೃದ್ಧಿಪಡಿಸಲಾಗಿರುವ ಪೋರ್ಟಲ್‌ನ್ನು ಬಳಸಿ ಸದರಿ ಪ್ರದೇಶಗಳನ್ನು ತಾಲೂಕು, ಹೋಬಳಿ, ಗ್ರಾಮ, ಸರ್ವೆ ಸಂಖ್ಯೆ, ವಿಸ್ತೀರ್ಣ ಇತ್ಯಾದಿಗಳನುಸಾರ ಗುರುತಿಸಲು ಉಪಯೋಗಿಸತಕ್ಕದ್ದು.

10) ಸದರಿ ಮೇಲ್ಕಾಣಿಸಿದ ಕಾರ್ಯವನ್ನು 4 ತಿಂಗಳುಗಳ ಅವಧಿಯೊಳಗಾಗಿ ಪೂರ್ಣಗೊಳಿಸತಕ್ಕದ್ದು ಹಾಗೂ ಕನಿಷ್ಠ ತಿಂಗಳಿಗೆ ಎರಡು ಬಾರಿ ಸಭೆಯನ್ನು ಜಿಲ್ಲಾ ಮಟ್ಟದಲ್ಲಿ ಕಡ್ಡಾಯವಾಗಿ ನಡೆಸುವುದು ಹಾಗೂ ಪ್ರಗತಿ ವರದಿಯನ್ನು ರಾಜ್ಯಮಟ್ಟದ ವಿಶೇಷ ತನಿಖಾ ತಂಡಕ್ಕೆ ಸಲ್ಲಿಸುವುದು.

ಈಗಾಗಲೇ ಈ ವಿಷಯದಲ್ಲಿ ಕೈಗೊಂಡ ಕಾರ್ಯಗಳ ಬಗ್ಗೆ ಮಾಹಿತಿ ನೀಡಲು ಸಭಾಧ್ಯಕ್ಷರು ತಿಳಿಸಿದರು. ಸಮಿತಿಯ ಕಾರ್ಯದರ್ಶಿಗಳು ಹಾಗೂ ಉಪ ವಿಭಾಗಾಧಿಕಾರಿಗಳು, ಧಾರವಾಡ ಉಪ ವಿಭಾಗ, ಧಾರವಾಡ ರವರು 1980 ಕ್ಕೂ ಪೂರ್ವದಲ್ಲಿ ಹಾಗೂ 1980 ರ ನಂತರ ಅರಣ್ಯ ಭೂಮಿಗಳನ್ನು ಅರಣ್ಯೇತರ ಚಟುವಟಿಕೆಗಳಿಗಾಗಿ ಬಿಡುಗಡೆ ಮಾಡಿರುವ ಬಗ್ಗೆ ಯಾದಿ ತಯಾರಿಸಿದ್ದು ಅದನ್ನು ಸಭೆಯ ಎಲ್ಲಾ ಸದಸ್ಯರಿಗೆ ನೀಡಿದರು.

ಸಮಿತಿಯ ಕಾರ್ಯದರ್ಶಿಗಳು ಮಾತನಾಡಿ 1980 ಕ್ಕೂ ಪೂರ್ವದಲ್ಲಿ ಹಾಗೂ 1980 ರ ನಂತರ ಅರಣ್ಯ ಭೂಮಿಗಳನ್ನು ಅರಣ್ಯೇತರ ಚಟುವಟಿಕೆಗಳಿಗಾಗಿ ಬಿಡುಗಡೆ ಮಾಡಿರುವ ಬಗ್ಗೆ ಯಾದಿ ತಯಾರಿಸಿದ್ದು ಅದನ್ನು ಉಪ ವಿಭಾಗಾಧಿಕಾರಿಗಳು, ಧಾರವಾಡ ಉಪ ವಿಭಾಗ, ಧಾರವಾಡ ರವರು ಪರಿಶೀಲಿಸಬೇಕಾಗಿದೆ. ಜೊತೆಗೆ ಅರಣ್ಯ

ಭೂಪರಿವರ್ತನೆ ಮಾಡಿದ ಆದೇಶಗಳ ಪ್ರತಿಗಳು ಬೇಕಾಗಿದ್ದು ಅದನ್ನು ಒದಗಿಸಬೇಕಾಗಿದೆ ಎಂದು ತಿಳಿಸಿದರು.

ಉಪ ವಿಭಾಗಾಧಿಕಾರಿಗಳು, ಧಾರವಾಡ ಉಪ ವಿಭಾಗ, ಧಾರವಾಡ ರವರು ಮಾತನಾಡಿ ತಮ್ಮ ಕಛೇರಿಯಲ್ಲಿ ತಯಾರಿಸಿ ಸಭೆಗೆ ಹಾಜರುಪಡಿಸಿದ ಯಾದಿ ಹಾಗೂ ಅರಣ್ಯ ಇಲಾಖೆಯಿಂದ ತಯಾರಿಸಿದ ಯಾದಿ ಎರಡನ್ನೂ ತಾಳೆ ಮಾಡಿ ಅಗತ್ಯವಾದ ದಾಖಲಾತಿಗಳನ್ನು ಪರಿಶೀಲನೆ ಮಾಡಲಾಗುವುದು. 1980 ರ ಪೂರ್ವದಲ್ಲಿ ಕಂದಾಯ ಇಲಾಖೆಯಿಂದ ಅಧಿಸೂಚಿತ ಅರಣ್ಯಗಳಲ್ಲಿ ಭೂ-ಪ್ರದೇಶವನ್ನು ಹಂಚಿಕೆ/ ಮಂಜೂರಾತಿ ಮಾಡಲಾಗಿದ್ದರೆ, ಸದರಿ ಮಂಜೂರಾತಿಯನ್ನು ಸಕ್ಷಮ ಪ್ರಾಧಿಕಾರದಿಂದ ಮಾಡಲಾಗಿದೆಯೇ? ಎಂಬುದನ್ನು ಎಂಬುದನ್ನು ಖಚಿತಪಡಿಸಿಕೊಳ್ಳಬೇಕಾಗುತ್ತದೆ. ಒಂದು ವೇಳೆ ಸಕ್ಷಮ ಪ್ರಾಧಿಕಾರದಿಂದ ಮಂಜೂರಾತಿಯನ್ನು ಮಾಡಲಾಗಿದ್ದರೆ, ಸದರಿ ಅರಣ್ಯ ಪ್ರದೇಶಗಳನ್ನು ಮಂಜೂರಾತಿ ಮಾಡಿದ ಪ್ರಾಧಿಕಾರಕ್ಕೆ ಅರಣ್ಯ ಪ್ರದೇಶವನ್ನು ಮಂಜೂರಾತಿ ಮಾಡುವ ಅಧಿಕಾರವನ್ನು ಯಾವ ಆದೇಶ/ ಕಾಯ್ದೆ/ ನಿಯಮಗಳಲ್ಲಿ ಪ್ರದತ್ತವಾಗಿದೆ ಎನ್ನುವುದರ ಕುರಿತಾದ ದಾಖಲೆಗಳ ವಿವರಗಳನ್ನು ಪರಿಶೀಲಿಸಿ ಅಂತಿಮ ಕರಡು ಯಾದಿಯನ್ನು ಸಂಬಂಧಪಟ್ಟ ಆದೇಶಗಳ ಪ್ರತಿಗಳೊಂದಿಗೆ ಮುಂದಿನ ಸಭೆಯಲ್ಲಿ ಸಲ್ಲಿಸುವುದಾಗಿ ತಿಳಿಸಿದರು.

ನಂತರ ಸಭಾಧ್ಯಕ್ಷರು ಮಾತನಾಡಿ ಈ ವಿಷಯವು ಅತ್ಯಂತ ಪ್ರಮುಖವಾಗಿದ್ದು ಆದ್ಯತೆ ಮೇರೆಗೆ ಕ್ರಮ ಕೈಗೊಳ್ಳಲು ತಿಳಿಸಿದರು. ಒಂದು ವಾರದಲ್ಲಿ ಸದರಿ ಕಾರ್ಯವನ್ನು ಕೈಗೊಂಡು ಈ ತಿಂಗಳೊಳಗಾಗಿ ಮತ್ತೊಂದು ಸಭೆ ನಡೆಸಲು ತಿಳಿಸಿದರು. ಸಭೆಯಲ್ಲಿ ಹಾಜರಿದ್ದ ಸರ್ವರೂ ಒಪ್ಪಿಗೆ ಸೂಚಿಸಿದರು. ಯಾವುದೇ ಅಡೆತಡೆ ಉಂಟಾದಲ್ಲಿ ಪ್ರತಿಯೊಬ್ಬರು ತಮ್ಮೊಳಗೇ ಚರ್ಚಿಸಿಕೊಂಡು ಮಾಹಿತಿ ತಯಾರಿಸಿಕೊಳ್ಳಲು ತಿಳಿಸಿದರು. ಮತ್ತೆ ಯಾವುದೇ ವಿಷಯವು ಚರ್ಚೆಗೆ ಇಲ್ಲದೇ ಇರುವುದರಿಂದ ಸಭೆಯನ್ನು ಅಧ್ಯಕ್ಷರ ಅನುಮತಿ ಮೇರೆಗೆ ಮುಕ್ತಾಯಗೊಳಿಸಲು ತೀರ್ಮಾನಿಸಲಾಯಿತು. ಸಮಿತಿಯ ಸದಸ್ಯರಾದ ಉಪ ವಿಭಾಗಾಧಿಕಾರಿಗಳು, ಧಾರವಾಡ ಉಪ ವಿಭಾಗ, ಧಾರವಾಡ ರವರು ಸರ್ವರಿಗೂ ವಂದನಾರ್ಪಣೆ ಮಾಡುವ ಮೂಲಕ ಸಭೆಯು ಮುಕ್ತಾಯಗೊಂಡಿತು.

ಅಪರ ಜಿಲ್ಲಾಧಿಕಾರಿಗಳು
ಹಾಗೂ ಅಪರ ಜಿಲ್ಲಾ ದಂಡಾಧಿಕಾರಿಗಳು,
ಧಾರವಾಡ ಜಿಲ್ಲೆ
ಹಾಗೂ ಅಧ್ಯಕ್ಷರು
**ಜಿಲ್ಲಾ ಮಟ್ಟದ ಉಪ ಸಮಿತಿ**

ಉಪ ಅರಣ್ಯ ಸಂರಕ್ಷಣಾಧಿಕಾರಿಗಳು,
ಧಾರವಾಡ ವಿಭಾಗ, ಧಾರವಾಡ
**ಹಾಗೂ ಸದಸ್ಯ ಕಾರ್ಯದರ್ಶಿಗಳು,**
**ಜಿಲ್ಲಾ ಮಟ್ಟದ ಉಪ ಸಮಿತಿ**

ಉಪ ವಿಭಾಗಾಧಿಕಾರಿಗಳು, ಧಾರವಾಡ
ಉಪ ವಿಭಾಗ, ಧಾರವಾಡ **ಹಾಗೂ**
**ಸದಸ್ಯರು,**
**ಜಿಲ್ಲಾ ಮಟ್ಟದ ಉಪ ಸಮಿತಿ**

ಜಿಲ್ಲಾಧಿಕಾರಿಗಳ ತಾಂತ್ರಿಕ ಸಹಾಯಕರು
ಹಾಗೂ ಪದನಿಮಿತ್ತ ಭೂ ದಾಖಲೆಗಳ ಉಪ
ನಿರ್ದೇಶಕರು, ಧಾರವಾಡ **ಹಾಗೂ ಸದಸ್ಯರು,**
**ಜಿಲ್ಲಾ ಮಟ್ಟದ ಉಪ ಸಮಿತಿ**

ಜಂಟಿ ನಿರ್ದೇಶಕರು,
ಸಮಾಜ ಕಲ್ಯಾಣ ಇಲಾಖೆ,,
**ಹಾಗೂ ಸದಸ್ಯರು,**
**ಜಿಲ್ಲಾ ಮಟ್ಟದ ಉಪ ಸಮಿತಿ**

**ನಂ:** ಸಿ4/ ಸರ್ವೇ/ SIT/ ಸಿ.ಆರ್- 1697/ 2024-25 **ದಿನಾಂಕ:** 03-12-2025

**ಪ್ರತಿಯನ್ನು ಮಾಹಿತಿ ಮತ್ತು ಮುಂದಿನ ಕ್ರಮಕ್ಕಾಗಿ**

1) ಮಾನ್ಯ ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ದಂಡಾಧಿಕಾರಿಗಳು, ಧಾರವಾಡ ಜಿಲ್ಲೆ, ಧಾರವಾಡ
2) ಮಾನ್ಯ ಅರಣ್ಯ ಸಂರಕ್ಷಣಾಧಿಕಾರಿಗಳು, ಧಾರವಾಡ ವೃತ್ತ, ಧಾರವಾಡ
3) ಅಪರ ಜಿಲ್ಲಾಧಿಕಾರಿಗಳು ಹಾಗೂ ಅಪರ ಜಿಲ್ಲಾ ದಂಡಾಧಿಕಾರಿಗಳು, ಧಾರವಾಡ ಜಿಲ್ಲೆ, ಧಾರವಾಡ
4) ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಧಾರವಾಡ ಪ್ರಾದೇಶಿಕ ಅರಣ್ಯ ವಿಭಾಗ, ಧಾರವಾಡ
5) ಉಪ ವಿಭಾಗಾಧಿಕಾರಿಗಳು, ಧಾರವಾಡ ಉಪ ವಿಭಾಗ, ಧಾರವಾಡ
6) ಜಂಟಿ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ, ಧಾರವಾಡ
7) ಜಿಲ್ಲಾಧಿಕಾರಿಗಳ ತಾಂತ್ರಿಕ ಸಹಾಯಕರು ಹಾಗೂ ಪದನಿಮಿತ್ತ ಭೂ ದಾಖಲೆಗಳ ಉಪ ನಿರ್ದೇಶಕರು, ಧಾರವಾಡ

O/C

15 DEC 2025
ಆವಕ ಗುಮಾಸ್ತ
ಜಿಲ್ಲಾಧಿಕಾರಿಗಳ ಕಚೇರಿ
ಧಾರವಾಡ

12/12/25
ಜಿಲ್ಲಾಧಿಕಾರಿಗಳ ಭೂಮಾಪನ ತಾಂತ್ರಿಕ ಸಹಾಯಕರು ಹಾಗೂ ಪದನಿಮಿತ್ತ ಭೂದಾಖಲೆಗಳ ಉಪ ನಿರ್ದೇಶಕರು ಧಾರವಾಡ

12/12/25
ಉಪ ವಿಭಾಗಾಧಿಕಾರಿಗಳ ಕಾರ್ಯಾಲಯ, ಧಾರವಾಡ